ಭೀಕರ ಆಪತ್ಕಾಲದಲ್ಲಿ ಸಮಾಜವು ಜೀವಂತವಾಗಿರಲು ವಿವಿಧ ಉಪಾಯಗಳನ್ನು ಹೇಳುವ ಗ್ರಂಥಗಳನ್ನು ಮೊದಲೇ ಪ್ರಕಟಿಸುವ ಏಕೈಕ ದ್ರಷ್ಟಾರ : ಪರಾತ್ಪರ ಗುರು ಡಾ. ಆಠವಲೆ !

**ಆಪತ್ಕಾಲದ ಸಂಜೀವಿನಿ : ಅಗ್ನಿಹೋತ್ರ - ಖಂಡ ೧**

**ಅಣುಯುದ್ಧದ ಭೀಕರ ಪರಿಣಾಮಗಳಿಂದ ರಕ್ಷಣೆಯಾಗಲು ಉಪಾಯ !**

# ಅಗ್ನಿಹೋತ್ರ

(Agnihotra) ಕನ್ನಡ (Kannada)

**ಸಂಕಲನಕಾರರು**


**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**



(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೮’ ರಲ್ಲಿ ಓದಿ.)


**ಸೂಕ್ಷ್ಮಜ್ಞಾನ ಪಡೆದವರು**


**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ**

**ಸೌ. ಪ್ರಿಯಾಂಕಾ ಸುಯಶ ಗಾಡಗೀಳ**





**ಸನಾತನ ಸಂಸ್ಥೆ**


**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ :** ಕು. ಮಧುರಾ ಭೋಸಲೆ ಮತ್ತು ಕು. ಹರ್ಷದಾ ದಾತೇಕರ

**First Edition** : Geetha Jayanthi, Kaliyug Varsh 5112
(17th December 2010)

**Fifth Edition** : Mahashivaratri, Kaliyug Varsh 5122
(11th March 2021)

**ಇಂದಿನವರೆಗೆ ಗ್ರಂಥದ 7,825 ಪ್ರತಿಗಳು ಪ್ರಕಾಶಿತಗೊಂಡಿವೆ !**

**Fifth Edition** : Mahashivaratri, Kaliyug Varsh 5124
**Fourth reprint** (18th February 2023)

Translated from the original Marathi text 'Agnihotra'
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ ಮತ್ತು ತೆಲುಗು ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಸೌ. ಪ್ರಜ್ಞಾ ರಾವ್
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 80/-

**ISBN :** 978-93-87641-91-4 ॐ ಗ್ರಂಥ ಕ್ರ. : 159

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೬
೨. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೯
೩. ಭೀಕರ ಆಪತ್ಕಾಲದಲ್ಲಿ ಸಂಜೀವಿನಿಯಾಗಬಲ್ಲ ಸನಾತನದ ಗ್ರಂಥಮಾಲಿಕೆಯ ಸವಿಸ್ತಾರ ಪರಿಚಯ ೧೦
೪. ಮನೋಗತ ೧೯

---

## ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)

೧. ಮೂರನೇ ಮಹಾಯುದ್ಧದ ಭೀಕರತೆ ಮತ್ತು ಅದರ ಮೇಲಿನ ಉಪಾಯಗಳು ೨೧
೨. ಸಾಧಕರೊಂದಿಗೆ ಸಾಮಾನ್ಯಜನರ ಜೀವವನ್ನು ಉಳಿಸಲು ಪ.ಪೂ. ಡಾಕ್ಟರರು ಹೇಳಿದ ಉಪಾಯ ೨೧
೩. ಅಗ್ನಿಹೋತ್ರ ೨೨
* ಪರಮಸದ್ಗುರು ಶ್ರೀಗಜಾನನಮಹಾರಾಜರ ಅಮೂಲ್ಯ ಬೋಧನೆಗಳು ೨೪
* ಮಹತ್ವ ಮತ್ತು ಲಾಭ ೨೫
* ಅಗ್ನಿಹೋತ್ರದ ಸ್ವರೂಪ ಮತ್ತು ಪ್ರಕ್ರಿಯೆ ೩೦
* ಹವನ ಪಾತ್ರೆ ೩೧
* ಹವನದ್ರವ್ಯಗಳು ೩೪
* ಅಗ್ನಿಹೋತ್ರ ಮಂತ್ರ ೪೩
* ಹವನವನ್ನು ಮಾಡುವಾಗ ಹವನಮಂತ್ರದಲ್ಲಿ ಬೆಳಗ್ಗೆ ಮತ್ತು ಸಾಯಂಕಾಲ ನಿರ್ಗುಣ ಸ್ತರದಲ್ಲಿನ ಪ್ರಜಾಪತಿ ಹಾಗೂ ಸಗುಣ ಸ್ತರದಲ್ಲಿ ಬೆಳಗ್ಗೆ ಸೂರ್ಯ ಮತ್ತು ಸಾಯಂಕಾಲ ಅಗ್ನಿದೇವತೆಯ ಸ್ಮರಣೆಯನ್ನು ಮಾಡುವುದರ ಕಾರಣಗಳು ೪೪
* ಸಮಯದ ಮಹತ್ವ ೪೮
* ಅಗ್ನಿಹೋತ್ರರೂಪಿ ಹವನದಿಂದ ಹೊರಸೂಸುವ ಮೂರು ವಿಧದ ತೇಜಗಳು ೫೩
* ಪರಿಣಾಮ ಉಳಿಯುವ ಕಾಲಾವಧಿ ೫೬
* ಅಗ್ನಿಹೋತ್ರದ ನಂತರ ಮಾಡಬೇಕಾದ ಕೃತಿಗಳು ೫೬

೪. ವಾತಾವರಣ ಶುದ್ಧಿಯ ಸಂದರ್ಭದಲ್ಲಿ ಅಗ್ನಿಹೋತ್ರ, ಯಜ್ಞ, ವ್ಯಷ್ಟಿ ಸಾಧನೆ ಮತ್ತು ಸಮಷ್ಟಿ ಸಾಧನೆಯ ಮಹತ್ವ ೬೫

卐 ಅಧ್ಯಾಯ ೬೮

卐 ಭೀಕರ ವಿಪತ್ತುಗಳಿಂದ ರಕ್ಷಣೆಯಾಗಲು ಸಾಧನೆ ಮಾಡುವುದು ಮತ್ತು ಭಗವಂತನ ಭಕ್ತರಾಗುವುದು ಅನಿವಾರ್ಯ ! ೭೧

卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೭೨

## ಗ್ರಂಥದ ಮುಖಪುಟದಲ್ಲಿ ಅಗ್ನಿಹೋತ್ರವನ್ನು ಮಾಡುವ ಸಾಧಕನನ್ನು ಮಡಿ ಬಟ್ಟೆಯಲ್ಲಿ ತೋರಿಸದೇ ದಿನನಿತ್ಯದ ಉಡುಪುಗಳಲ್ಲಿ ತೋರಿಸಲು ಕಾರಣಗಳು

ಸಾಮಾನ್ಯವಾಗಿ ಯಜ್ಞವೆಂದರೆ ಮಡಿ-ಮೈಲಿಗೆಗಳನ್ನು ಪಾಲಿಸುವುದು ನಮ್ಮ ಕಣ್ಣೆದುರಿಗೆ ಬರುತ್ತದೆ. ಅಗ್ನಿಹೋತ್ರ ಯಜ್ಞವು ಬಂಧನಮುಕ್ತವಾಗಿರುವುದರಿಂದ ಅದನ್ನು ಇಂದಿನ ಆಧುನಿಕ ಯುಗದಲ್ಲಿ ಸ್ತ್ರೀ-ಪುರುಷರು ಮತ್ತು ಮಕ್ಕಳು ಹೀಗೆ ಯಾರು ಬೇಕಾದರೂ ಮಾಡಬಹುದು. ಸಮಾಜಕ್ಕೆ ಈ ಸಂದೇಶ ನೀಡಲು ನಾವು ಗ್ರಂಥದ ಮುಖಪುಟದಲ್ಲಿ ಅಗ್ನಿಹೋತ್ರ ಮಾಡುವ ಸಾಧಕನನ್ನು ಮಡಿಬಟ್ಟೆಗಳಲ್ಲಿ ತೋರಿಸದೇ ದಿನನಿತ್ಯದ ಉಡುಪುಗಳಲ್ಲಿ ತೋರಿಸಿದ್ದೇವೆ.

## ಪರಾತ್ಪರ ಗುರು ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾದ ಸದ್ಗುರು (ಸೌ.) ಬಿಂದಾ ಸಿಂಗಬಾಳ ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳ ಇವರ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗದರ್ಶನ ಮಾಡುತ್ತಾರೆ. ೧೩.೫.೨೦೨೦ ರಂದು ಸಪ್ತರ್ಷಿಗಳು, 'ಇನ್ನು ಮುಂದೆ ಸದ್ಗುರು (ಸೌ.) ಬಿಂದಾ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ' ಎಂದು ಸಂಬೋಧಿಸಬೇಕು; ಏಕೆಂದರೆ ಈ ಹೆಸರುಗಳಿಂದ ಇಬ್ಬರಿಗೂ ದೇವಿತತ್ತ್ವ ಸಿಗುವುದು, ಹಾಗೆಯೇ ಆ ರೀತಿ ಉಲ್ಲೇಖಿಸುವವರಿಗೂ ಇದರ ಲಾಭವಾಗುವುದು' ಎಂದು ಹೇಳಿದ್ದಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ಈ ರೀತಿ ಸಂಬೋಧನೆ ಮಾಡಲಾಗುತ್ತಿದೆ. ಇವರ ಹೆಸರಿನ ಸಂಬೋಧನೆಯ ಬಗ್ಗೆ ಪರಾತ್ಪರ ಗುರು ಡಾ. ಆಠವಲೆಯವರು "ಶ್ರೀಸತ್‌ಶಕ್ತಿ'ಯು ಭಗವಂತನ ಶಾಶ್ವತ ಸ್ವರೂಪಕ್ಕೆ ಸಂಬಂಧಿಸಿದೆ ಮತ್ತು 'ಶ್ರೀಚಿತ್‌ಶಕ್ತಿ'ಯು ಭಗವಂತನ ವೈಶ್ವಿಕ ಜ್ಞಾನಕ್ಕೆ ಸಂಬಂಧಿಸಿದೆ" ಎಂದು ಹೇಳಿದರು.

## ವಿಷಯಸೂಚಿಯಲ್ಲಿನ ಕ್ರಮಾಂಕ ೪

## ಮನೋಗತ

### ಮುಂದಿನ ನೂರಾರು ಪೀಳಿಗೆಗಳಿಗೆ ಉಪಯುಕ್ತವಾಗಲಿರುವ ಸನಾತನದ ಗ್ರಂಥಮಾಲಿಕೆ 'ಆಪತ್ಕಾಲದ ಸಂಜೀವಿನಿ' !

'ಹಿಂದಿನ ಕಾಲದಲ್ಲಿ ಯಾರಿಗಾದರೂ ಹುಷಾರಿಲ್ಲದಿದ್ದರೆ ಅಜ್ಜಿಯಂತಹ ಅನುಭವಿ ಹಿರಿಯರು ಮನೆಯಲ್ಲಿಯೇ ಅವರನ್ನು ಉಪಚರಿಸುತ್ತಿದ್ದರು. ಇದರಿಂದಾಗಿ ಅವರಿಗೆ ಪ್ರತಿಸಲ ಡಾಕ್ಟರರಲ್ಲಿಗೆ ಹೋಗುವ ಪರಿಸ್ಥಿತಿ ಬರುತ್ತಿರಲಿಲ್ಲ. ಔಷಧೋಪಚಾರದ ಈ ಪದ್ಧತಿಯನ್ನು ಮೆಚ್ಚುಗೆಯಿಂದ 'ಮನೆ ಮದ್ದು' ಎಂದು ಹೇಳುತ್ತಾರೆ. ಈ ಸಹಜಸುಲಭ ಮತ್ತು ಪಾರಂಪರಿಕ ಪದ್ಧತಿಯು ಇಂದು ಹೆಚ್ಚುಕಡಿಮೆ ಲೋಪವಾಗುತ್ತಿದೆ. ಇದರಿಂದಾಗಿ ಜನರು ಇಂದು ಸ್ವಲ್ಪ ಅನಾರೋಗ್ಯವೆನಿಸಿದರೂ ಡಾಕ್ಟರರಲ್ಲಿಗೆ ಹೋಗುತ್ತಿದ್ದಾರೆ. ಸನಾತನದ 'ಆಪತ್ಕಾಲದ ಸಂಜೀವಿನಿ' ಮಾಲಿಕೆಯಲ್ಲಿನ ವಿವಿಧ ಗ್ರಂಥಗಳಿಂದಾಗಿ ಈಗ ಮನೆಯಲ್ಲಿಯೇ ಮತ್ತು ಯಾವುದೇ ದುಷ್ಪರಿಣಾಮವಿಲ್ಲದೆಯೇ ಸುಲಭವಾಗಿ ಉಪಾಯ ದೊರಕುವಂತಾಗಿದೆ. ಈ ಎಲ್ಲ ಉಪಾಯಪದ್ಧತಿಗಳು ಮುಂದಿನ ನೂರಾರು ಪೀಳಿಗೆಗಳಿಗೆ ಉಪಯುಕ್ತವಾಗಲಿವೆ. 'ಈ ಉಪಾಯಗಳನ್ನು ಶ್ರದ್ಧೆಯಿಂದ ಮಾಡುವ ಸದ್ಬುದ್ಧಿ ಎಲ್ಲರಿಗೂ ಬರಲಿ ಮತ್ತು ಇದಕ್ಕಾಗಿ ಈ ಗ್ರಂಥಗಳು ಮನೆ-ಮನೆಯವರೆಗೂ ತಲುಪಲಿ' ಎಂದು ಈಶ್ವರನ ಚರಣಗಳಲ್ಲಿ ಪ್ರಾರ್ಥನೆ !' – (ಪರಾತ್ಪರ ಗುರು) ಪಾಂಡೆ ಮಹಾರಾಜರು (೩.೧೨.೨೦೧೭)

ತ್ರಿಕಾಲಜ್ಞಾನಿ ಸಂತರು, ಮುಂದೆ ಭೀಕರ ಆಪತ್ಕಾಲ ಬರಲಿದೆ ಮತ್ತು ಅದರಲ್ಲಿ ಜಗತ್ತಿನಲ್ಲಿನ ಬಹಳಷ್ಟು ಜನರು ನಾಶವಾಗುವವರಿದ್ದಾರೆ ಎಂದು ಹೇಳಿದ್ದಾರೆ. 'ಮುಂದೆ ಆಪತ್ಕಾಲ ಬರಲಿದೆ' ಎಂದು ಹೇಳುವುದಕ್ಕಿಂತ ಈಗ ಆಪತ್ಕಾಲ ಪ್ರಾರಂಭವಾಗಿದೆ ಎನ್ನುವುದೇ ಸೂಕ್ತವಾಗಿದೆ. ಆಪತ್ಕಾಲದಲ್ಲಿ ಮೂರನೇ ಮಹಾಯುದ್ಧ ಪ್ರಾರಂಭವಾಗಬಹುದು. ಈಗ ಜಗತ್ತಿನಲ್ಲಿನ ಎಲ್ಲ ರಾಷ್ಟ್ರಗಳ ಬಳಿ ಎರಡನೇ ಮಹಾಯುದ್ಧಕ್ಕಿಂತ ಮಹಾ ಸಂಹಾರಕ ಅಣ್ವಸ್ತ್ರಗಳಿವೆ. ಮುಂದೆ ಅವುಗಳನ್ನು ಒಬ್ಬರ ಮೇಲೊಬ್ಬರು ಉಪಯೋಗಿಸಬಹುದು. ಈ ಯುದ್ಧದಲ್ಲಿ ಬದುಕಬೇಕಾದರೆ, ಅಣ್ವಸ್ತ್ರಗಳನ್ನು ನಿಷ್ಕ್ರಿಯಗೊಳಿಸುವ ಪ್ರಭಾವಿ ಉಪಾಯಗಳು ಬೇಕು; ಹಾಗೆಯೇ ಈ ಅಣ್ವಸ್ತ್ರಗಳಿಂದ ಹೊರಸೂಸುವ ವಿಕಿರಣಗಳ ಹರಡುವಿಕೆಯನ್ನು ನಾಶಗೊಳಿಸುವ ಉಪಾಯಗಳೂ ಬೇಕು. ಇದಕ್ಕೆ ಸ್ಥೂಲದಲ್ಲಿನ ಉಪಾಯಗಳು ಉಪಯೋಗಕ್ಕೆ ಬರಲಾರವು, ಏಕೆಂದರೆ ಅಣುಬಾಂಬು ಸಾಮಾನ್ಯ ಬಾಂಬಿಗಿಂತ ಸೂಕ್ಷ್ಮವಾಗಿದೆ. ಸ್ಥೂಲ (ಉದಾ. ಬಾಣವನ್ನು ಬಿಟ್ಟು ಶತ್ರುವನ್ನು ನಾಶ ಮಾಡುವುದು), ಸ್ಥೂಲ

ಮತ್ತು ಸೂಕ್ಷ್ಮ (ಉದಾ. ಮಂತ್ರವನ್ನು ಹೇಳಿ ಬಾಣವನ್ನು ಬಿಡುವುದು), ಸೂಕ್ಷ್ಮತರ (ಉದಾ. ಕೇವಲ ಮಂತ್ರವನ್ನು ಹೇಳುವುದು) ಮತ್ತು ಸೂಕ್ಷ್ಮತಮ (ಉದಾ. ಸಂತರ ಸಂಕಲ್ಪ) ಹೀಗೆ ಮುಂದುಮುಂದಿನ ಪ್ರಭಾವಶಾಲಿ ಹಂತಗಳಿವೆ. ಸ್ಥೂಲಕ್ಕಿಂತ ಸೂಕ್ಷ್ಮವು ಅನೇಕ ಪಟ್ಟು ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಆದುದರಿಂದ ಅಣು ಬಾಂಬಿನಂತಹ ಪ್ರಭಾವಿ ಸಂಹಾರಕ ವಿಕಿರಣಗಳ ಹರಡುವಿಕೆಯನ್ನು ತಡೆಗಟ್ಟಲು ಸೂಕ್ಷ್ಮದಲ್ಲಿಯೇ ಏನಾದರೂ ಮಾಡಬೇಕಾಗುತ್ತದೆ. ಇದಕ್ಕೆ ಋಷಿಮುನಿಗಳು ಯಜ್ಞದ ಪ್ರಥಮಾವತಾರವಾಗಿರುವ 'ಅಗ್ನಿಹೋತ್ರ'ವನ್ನು ಮಾಡಲು ಹೇಳಿದ್ದಾರೆ. ಅಗ್ನಿಹೋತ್ರವು ಮಾಡಲು ಅತ್ಯಂತ ಸುಲಭ, ಅತ್ಯಂತ ಕಡಿಮೆ ಕಾಲಾವಧಿಯಲ್ಲಿ ಆಗುವ ಮತ್ತು ಸೂಕ್ಷ್ಮದಲ್ಲಿ ಪ್ರಭಾವಿ ಪರಿಣಾಮವನ್ನು ಬೀರುವ ಉಪಾಯವಾಗಿದೆ. ಇದರಿಂದ ವಾತಾವರಣವು ಚೈತನ್ಯಮಯವಾಗುತ್ತದೆ ಮತ್ತು ನಮ್ಮ ಸುತ್ತಲೂ ರಕ್ಷಾಕವಚವೂ ನಿರ್ಮಾಣವಾಗುತ್ತದೆ. ಸಾಮಾನ್ಯ ಜನರು ಇಷ್ಟು ಮಾಡಿದರೂ ಸಾಕಾಗುತ್ತದೆ. ಇದಕ್ಕಿಂತಲೂ ಪ್ರಭಾವಿ, ಅಂದರೆ ಸೂಕ್ಷ್ಮ ಉಪಾಯವೆಂದರೆ ಸಾಧನೆಯನ್ನು ಮಾಡುವುದು. ಸಾಧನೆಯಿಂದ ಆತ್ಮಬಲ ಪ್ರಾಪ್ತವಾಗುತ್ತದೆ ಮತ್ತು ನಮ್ಮ ಕಾರ್ಯಕ್ಕೆ ಬಲ ಪ್ರಾಪ್ತವಾಗುತ್ತದೆ. ಸಾಮಾನ್ಯ ವ್ಯಕ್ತಿಗೆ ಅಗ್ನಿಹೋತ್ರವನ್ನು ಮಾಡುವುದರಿಂದ ಯಾವ ಲಾಭವು ಸಿಗುತ್ತದೆಯೋ, ಆ ಲಾಭವು ಸಾಧನೆಯನ್ನು ಮಾಡುವ ಮತ್ತು ಶೇ. ೬೦ ರಷ್ಟು ಆಧ್ಯಾತ್ಮಿಕ ಪ್ರಗತಿಯಾಗಿರುವ ಸಾಧಕನು ಕೇವಲ ಪ್ರಾರ್ಥನೆಯನ್ನು ಮಾಡಿದರೂ ಸಿಗುತ್ತದೆ.

ಅಗ್ನಿಹೋತ್ರದ ಮಹತ್ವ, ಅಗ್ನಿಹೋತ್ರವನ್ನು ಮಾಡುವ ಪದ್ಧತಿ ಮತ್ತು ಅದರ ಸೂಕ್ಷ್ಮದಲ್ಲಿನ ಪರಿಣಾಮಗಳನ್ನು ತಿಳಿಸಿಹೇಳುವ ಗ್ರಂಥವನ್ನು ಪ್ರಸ್ತುತಪಡಿಸುತ್ತಿದ್ದೇವೆ. ಈ ಗ್ರಂಥವನ್ನು ಅಧ್ಯಯನ ಮಾಡಿ ಸಾಮಾನ್ಯ ಜನರಿಗೆ ಅಗ್ನಿಹೋತ್ರದ ಮತ್ತು ಸಾಧನೆಯ ಮಹತ್ವವು ತಿಳಿಯಲಿ ಮತ್ತು ಅವರು ಅದನ್ನು ಆಚರಣೆಯಲ್ಲಿ ತರಲಿ, ಎಂಬುದೇ ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

**ಸನಾತನದ ಗ್ರಂಥಕಾರ್ಯದಲ್ಲಿ ಪಾಲ್ಗೊಂಡು ಸಮಷ್ಟಿ ಸಾಧನೆ ಮಾಡಿ !**

- ಮರಾಠಿ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡುವುದು
- ಗ್ರಂಥದ ರಚನೆಯನ್ನು 'ಇನ್‌ಡಿಸೈನ್' ಎಂಬ ಗಣಕ ತಂತ್ರಾಂಶದಲ್ಲಿ ಮಾಡುವುದು

**ಸಂಪರ್ಕಿಸಿ :** ೯೩೪೨೨೪ ೩೫೬೧೭ kannada.granth@gmail.com